

ಹಾಗೆ ಕೇಳುತ್ತಲೇ ಮೂಲೆಯಲ್ಲಿದ್ದ ತನ್ನ ಪರ್ಸ್ ತೆಗೆದಳು.

'ಜರ್ಮನಿ ಅಂದರೆ ಅದು ಒಂದು ಊರಲ್ಲ ಚಂದು. ಅದು ದೇಶ. ಆ ದೇಶದಲ್ಲಿ ಎಲ್ಲೋ ಒಂದೂರಲ್ಲಿ ಇವರಿದ್ದಾರೆ. ನಿನ್ನ ಬರ್ನಾಡೊ ಎಲ್ಲ ಇವರಿಗೆ ಗೊತ್ತಿರುವುದಿಲ್ಲ. ನೀನು ಅವನ ಫೋಟೊ ಇನ್ನೂ ಇಟ್ಕೊಂಡಿದ್ದೀಯಾ' ಛಾಯಾ ಗದರುವಂತೆ ಹೇಳಿದಳು. ಚಂದು ಬುದ್ಧಿವಂತಳಂತೆ ನಗುತ್ತ 'ಅದು ನಮ್ಮೋರೆಲ್ಲ ಇರುವ ಗ್ರೂಪ್ ಫೊಟೊ. ಬಬ್ರುಗೇನು ಗೊತ್ತಾಗೋದಿಲ್ಲ ಛಾಯಕ್ಕ' ಅಂದಳು.

'ಕೈಕೊಟ್ಟು ಓಡಿ ಹೋದ ಆ ಮನುಷ್ಯ ಪುಣ್ಯವಂತನೇ ಬಿಡು' ಛಾಯಾ ಮಾತು ಮುಗಿದಿರಲಿಲ್ಲ. 'ಜೋಡಿ ಆಗೋವಾಗ ನಾನೂ ಕೇಳಿರ್ಲಿಲ್ರಿ' ನಗುತ್ತಲೇ ಭಂಡಳಂತೆ ಹೇಳಿದಳು ಚಂದು.

'ಚಾಲಾಕಿ ಇದ್ದಿ ನೀನು. ಆದ್ರೂ ಬರ್ನಾಡೂ ಏನು ಇವರಿಗೆ ಗೊತ್ತಿರೋದಿಲ್ಲ. ಸುಮ್ನಿರು' ಅಂದಳು. ಅವಿನಾಶ ಛಾಯಾಳನ್ನೇ ಪ್ರಶ್ನಾರ್ಥಕವಾಗಿ ನೋಡಿದ. ಅವಳು ಮೂರ್ತಿಯವರ ಮುಖ ನೋಡಿದಳು.

'ಆತ ನಮ್ಮ ಬಬ್ರು ಅಪ್ಪ ಅಂತೇಳೋದು ಬಿಟ್ಟು ಅದ್ಯಾಕೆ ಹಂಗೆ ಮೊಗ ನೋಡ್ತೀರವ್ವಿ' ಅಂದುಬಿಟ್ಟಳು ಚಂದು.

'ಆಯ್ತು ತಾಯಿ. ಹೇಳ್ತೀವಿ. ಈಕೆ ಹೇಳ್ತಿರೋ ಬಬ್ರು ನಿಮಗೆ ಸಿಕ್ಕಿದ ಗೈಡ್ ವೀರೇಶ ಹಂಪಿ ಒಬ್ಬನೇ' ಅಂದವರೆ ಅವಿನಾಶನಿಗೆ, 'ಬನ್ನಿ ಅವಿನಾಶ್. ನೀವು ಬಜಾರ್ ಪೂರ್ತಿ ನೋಡಿಲ್ಲ ಅಲ್ವಾ. ಅಲ್ಲಿತನಕ ಹೋಗಿ ಬರೋಣ' ಅನ್ನುತ್ತ ಹೊರಗಿಳಿದರು. ಅವಿನಾಶ ಛಾಯಾಳನ್ನೊಮ್ಮೆ ನೋಡಿ ಮೂರ್ತಿಯವರನ್ನು ಹಿಂಬಾಲಿಸಿದ. ಸ್ವಲ್ಪ ದೂರದವರೆಗೆ ಈ ವಿಚಾರ ಮರೆತವರಂತೆ ಅಂಗಡಿಗಳನ್ನು ನೋಡುತ್ತ ; ಅಲ್ಲಿಯ ವ್ಯಾಪಾರದ ಬಗ್ಗೆ ಹೇಳಿದವರು ಇದ್ದಕ್ಕಿದ್ದಂತೆ, 'ಛಾಯಾ ಹೇಳಿದ ಬರ್ನಾಡೊ ಬಗ್ಗೆ ಹೇಳ್ಬೇಕಂದ್ರೆ ವೀರೇಶನ ಬಗ್ಗೆನೂ ಹೇಳ್ಬೇಕು. ನನ್ನ ಕುಟುಂಬದ ಬಗ್ಗೆನೂ ಹೇಳ್ಬೇಕು. ನಿಂಗೆ ಅಷ್ಟು ತಾಳ್ಮೆ ಇದೆಯಾ?' ಕೇಳಿದರು. ಅವಿನಾಶ ಆಗಲೇ ಬರ್ನಾಡೊ ಎಂಬ ಸುಳಿಯೊಳಗೆ ಬಿದ್ದಾಗಿತ್ತು. ಹೊರ ಬರಬೇಕಾದರೆ ಮೂರ್ತಿಯವರು ಆ ವಿಚಾರ ಮಾತಾಡಬೇಕು. 'ಇದೂ ಒಂದು ನಮೂನೆಯ ಇತಿಹಾಸವೇ ತಾನೆ. ನೀವು ಈ ರಾತ್ರಿ ಪೂರ್ತಿ ಮಾತಾಡಿದರೂ ಕೇಳುವ ತಾಳ್ಮೆ ಇದೆ ಸರ್' ಅಂದ. ಮೂರ್ತಿಯವರು ಅಲ್ಲೆ ಟೀ ಸ್ಟಾಲ್ ಒಂದರ ಬದಿಯಲ್ಲಿರುವ ಬೆಂಚಿನ ಮೇಲೆ ಕುಳಿತುಕೊಂಡರು. ಅವನೂ ಕುಳಿತ ಮೇಲೆ,

'ಅಷ್ಟು ಬಿಡುವಿದ್ರೆ ರಾತ್ರಿಯನ್ನ ಅದಕ್ಕಾಗಿ ವೇಸ್ಟ್ ಮಾಡುವುದು ಬೇಡ. ವೀರೇಶನಿಗೆ ಫೋನ್ ಮಾಡಿ ಕರೆಸ್ತೀನಿ. ರಾತ್ರಿ ನಮ್ಮನೆ ಹಿಂದೆ ಕ್ಯಾಂಪ್ ಫೈರ್ ಹಾಕಿ ಅವನ ಇಂಪನಿ ನಾದ ಕೇಳಿದರೆ ಮನುಷ್ಯರು ಮಾತ್ರ